Sri B. VAIKUNTA BALIGA.—The Government contemplate starting more centres.

Sri J. B. MALLARADHYA.—When was these rules last revised ?

Sri B. VAIKUNTA BALIGA.—I cannot tell you that off-hand.

Sri U. M. MADAPPA.—Are the Government aware that Appointing authorities have not been sending in vacancy lists to the Exchange Office ?

Sri B. VAIKUNTA BALIGA.—Is it has now been made compulsory to a certain extent. Still, there are some who have not complained with it. Attempt is being made to prevent such things.

Sri U. M. MADAPPA.—Is it not a fact they are taking shelter under the rule that for 15 days vacancies they may themselves appoint ?

Sri B. VAIKUNTA BALIGA.—Is for that purpose all steps are being taken and every effort is being taken to collect information not only for this purpose but also we may have complete, accurate and full data.

Sri G. DUGGAPPA.—May I know whether it has come to the notice of Government that employment exchange not working properly ?

Sri B. VAIKUNTA BALIGA.—My friend is not right.

Sri C. M. ARUMUGHAM.—May I know whether the Government are aware that the Kolar Gold Mines Undertaking are not drawing candidates from the Kolar Gold Fields Employment Exchange ?

Sri B. VAIKUNTA BALIGA.—The question is slightly different. Whatever is mentioned I will take note of and see what can be done.

Sri C. M. ARUMUGHAM.—Are they drawing candidates from the Employment Exchange ?

Sri B. VAIKUNTA BALIGA.—To the extent I am aware, they are, but if there is anything that has not been done and if is brought to my notice I will try to take steps.

RELEASE OF FOREST AREA FOR CULTIVATION IN YELANDUR TALUK.

*Q.—805. Smt. KEMPAMMA (Kollegal).—

Will the Government be pleased to state :—

(*a*) the extant of forest area in Yelandur Taluk ;

(*b*) whether it is true that some area fit to be released for cultivation without affecting the forest wealth or its income is available in the forest area ;

(*c*) the extent of area out of it available to be released for cultivation to landless ryots ;

(*d*) whether they intend to release it to the landless ryots ?

A.—Sri H. S. RUDRAPPA (Minister for Forests).—

(a) 22,682 Acres.

(b) No.

(c) & (d) Does not arise in view of reply to Clause (b)

ಶ್ರೀಮತಿ ಕೆಂಪಮ್ಮ.—ಯಳಂದೂರು ತಾಲ್ಲೂಕಿನಲ್ಲಿ ಅರಣ್ಯಕ್ಷೇತ್ರ ಬಟ್ಟು 22,682 ಎಕರೆ ಇದೆ ಎಂದು ಹೇಳಿದ್ದೀರಿ; ಅದರಲ್ಲಿ ಅರಣ್ಯ ಬಿಟ್ಟು ಅರಣ್ಯವಿಲ್ಲದಿರುವ ಜಮೀನು ಎಷ್ಟು?

ಶ್ರೀ ಎಚ್. ಎಸ್. ರುದ್ರಪ್ಪ.—ಖಾಲಿ ಭೂಮಿ ಯಾವುದು ಇಲ್ಲ. ಎಲ್ಲಾ ಅರಣ್ಯ ಇರುವುದು.

ಶ್ರೀಮತಿ ಕೆಂಪಮ್ಮ.—ಅರಣ್ಯದಲ್ಲಿ ಯಾರಾದರೂ ಅಕ್ರಮವಾಗಿ ಸಾಗು ಮಾಡಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ತೆಗೆದುಕೊಳ್ಳುತ್ತೇವೆ.

ಶ್ರೀಮತಿ ಕೆಂಪಮ್ಮ.—ಆ ಅರಣ್ಯದಲ್ಲಿ ಸರ್ವೆ ನಂಬರ್ 71 ಮತ್ತು 72ನ್ನು ಹರಿಜನರಿಗೆ ಸಾಗಿಗೆ ಕೊಡುತ್ತೀರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ಅರಣ್ಯ ಇರತಕ್ಕ ಪ್ರದೇಶ ಬಹಳ ಕಡಿಮೆ ಇದೆ. ಆದ್ದರಿಂದ ಅದನ್ನು ಹೆಚ್ಚಿಸಬೇಕಾಗಿದೆ. ಬಹಳ ಅವಶ್ಯಕವಾದ ಸಂದರ್ಭದಲ್ಲಿ ಮಾತ್ರ ಬಟ್ಟು ಕೊಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಈಗ ಅವರು ಕೇಳತಕ್ಕ ಪ್ರದೇಶದಲ್ಲಿ ಮರಗಳು ಏನಾದರೂ ಇವೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಮರಗಳು ಇಲ್ಲದೆ ಇರತಕ್ಕ ಪ್ರದೇಶ ಯಾವುದು ಇಲ್ಲ. ಉಳುವುದಕ್ಕೆ ಬಾರದೆ ಇರುವ ಮತ್ತು ಕಲ್ಲು ಇರುವ ಪ್ರದೇಶ ಕೆಲವು ಭಾಗ ಮಾತ್ರ ಇದೆ. ಅದರಲ್ಲಿ ಗಂಧದ ಸಸಿಗಳು ಇವೆ.

ಶ್ರೀ ಯು. ಎಂ. ಮಾದಪ್ಪ.—ಪ್ಲಾಂಟೇಷನ್ ಮಾಡದೆ ಬಹಳ ದಿವಸಗಳಿಂದ ಖಾಲಿ ಜಾಗ ಇರುವುದು ತಮಗೆ ಗೊತ್ತಿದೆಯೇ?

ಶ್ರೀ ಎಚ್. ಎಸ್. ರುದ್ರಪ್ಪ.—ಸಾಮಾನ್ಯವಾಗಿ ಅರಣ್ಯ ತಾನಾಗಿಯೇ ಬೆಳೆಯುತ್ತದೆ. ಜನಗಳ ಬಾಧೆ ಇಲ್ಲದೆಇದ್ದರೆ ಹಾಗೆಯೇ ಅರಣ್ಯ ಬೆಳೆಯತಕ್ಕ ಪ್ರದೇಶ ಇದೆ. ಅರಣ್ಯವನ್ನು ಯಾವ ರೀತಿ ಕಾಪಾಡಬೇಕೋ ಆ ರೀತಿ ಕಾಪಾಡದೆ ಇರುವುದರಿಂದ ಅರಣ್ಯ ಲುಕ್ಸಾನು ಆಗಿದೆ. ಆದ್ದರಿಂದ ಈಗ ಅದನ್ನು ಬೆಳೆಸುತ್ತಿದ್ದೇವೆ.

ಶ್ರೀ ಬಿ. ರಾಚಯ್ಯ.—ಇಷ್ಟೊಂದು ಪೀಲ್ಪಚಾರಣೆ ಇದ್ದರೂ ಕೂಡ ಅನೇಕ ಎಕರೆಗಳಲ್ಲಿ ಸಾಗು ಮಾಡುತ್ತಿದ್ದಾರೆ. ಇದಕ್ಕೆ ಕಾರಣವೇನು?

ಶ್ರೀ ಎಚ್. ಎಸ್. ರುದ್ರಪ್ಪ.—ಅದು ನನಗೆ ಗೊತ್ತಿಲ್ಲ. ಇನ್‌ಫರ್‌ಮೇಷನ್ ಕೊಟ್ಟರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ರಾಚಯ್ಯ.—ಕಾನೂನುಬದ್ಧವಾಗಿ ಸರ್ಕಾರದ ಮಂಜೂರಾತಿಯನ್ನು ಪಡೆಯದೆ ಅಕ್ರಮವಾಗಿ ಪ್ರವೇಶ ಮಾಡಿರುವ ಜನಗಳ ಮೇಲೆ ಸರ್ಕಾರದವರು ತೀವ್ರವಾದ ಕ್ರಮ ತೆಗೆದುಕೊಳ್ಳುತ್ತಾರಾ?

ಶ್ರೀ ಎಚ್. ಎಸ್. ರುದ್ರಪ್ಪ.—ಖಂಡಿತಾ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ವೆಂಕಟೇಗೌಡ.—ಹಿಂದೆ ವ್ಯವಸಾಯದಲ್ಲಿದ್ದಂಥ ಅನೇಕ ಜಮೀನುಗಳು ಅರಣ್ಯ ಪ್ರದೇಶದಲ್ಲಿ ಸೇರಿರುವುದು ನಿಜವೇ?

ಶ್ರೀ ಎಚ್. ಎಸ್. ರುದ್ರಪ್ಪ.—ಅದು ಗೊತ್ತಿಲ್ಲ. ಈಗಿರುವುದಂತೂ ಅರಣ್ಯ ಪ್ರದೇಶ ಎಂದು ಗೊತ್ತಾಗಿದೆ.

ಶ್ರೀ ಡಿ. ಮಂಜಪ್ಪ.—ಅರಣ್ಯ ಪ್ರದೇಶದ ಮುಖ್ಯಭಾಗವನ್ನು ಜಾಗು ಭೂಮಿ ಇದ್ದು ಗಿಡ ಮರ ಬೆಳೆಯದ ಪ್ರದೇಶ ಎಷ್ಟಿದೆ ಎಂಬುದನ್ನು ಕೇಳುತ್ತೀರಾ ?

ಅಧ್ಯಕ್ಷರು.—ನೀವು ಶಿವಮೊಗ್ಗಾ ಪ್ರದೇಶದ ವಿಷಯವನ್ನು ಕೇಳಬೇಡಿ, ಯಳಂದೂರಿನ ವಿಷಯ ಇದ್ದರೆ ಮಾತ್ರ ಕೇಳಿ, ಅಷ್ಟೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅರಣ್ಯ ಪ್ರದೇಶದಲ್ಲಿ ಸಾಗುವಳಿ ಇಟ್ಟುಕೊಂಡಿದ್ದವರಿಗೆ ಶಿಕ್ಷೆ ಮಾಡುತ್ತೇವೆ ಎಂದು ಹೇಳಿದಿರಿ. ಎಳಂದೂರಿನಲ್ಲಿ ಮಾತ್ರ ಮಾಡುತ್ತೀರೋ, ಅಥವಾ ಯಾವ ಊರಿನಲ್ಲಿದ್ದರೂ ಮಾಡುತ್ತೀರೋ ?

ಶ್ರೀ ಎಚ್. ಎಸ್. ರುದ್ರಪ್ಪ.—ಯಾವ ಊರಿನಲ್ಲಿದ್ದರೂ ಮಾಡುತ್ತೇವೆ. ಗುಂಡ್ಲುಪೇಟೆ ಪ್ರದೇಶದಲ್ಲಿದ್ದರೂ ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಡಿಸ್ಟ್ರಿಕ್ಟ್ ಫಾರೆಸ್ಟ್ ನಮಗೆ ಸೇರಿದ್ದು ಎಂದು ರೆವಿನ್ಯೂ ಇಲಾಖೆಯವರು ಇತ್ತೀಚೆಗೆ ಅಕ್ರಮ ಪ್ರವೇಶ ಮಾಡಿರುವ ಸಂದರ್ಭ ಇದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಒಂದು ಶಾಖೆಯು ಮೇಲೆ ಇನ್ನೊಂದು ಶಾಖೆ ಅಕ್ರಮ ಮಾಡುವುದಿಲ್ಲ.

ಶ್ರೀ ಯು.ಎಂ. ಮಾದಪ್ಪ.—ಸಾರ್ವಜನಿಕರೇನಾದರೂ ಆ ರೀತಿ ಅಕ್ರಮಪ್ರವೇಶ ಮಾಡಿದರೆ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕಾರ ಕ್ರಮ ತೆಗೆದುಕೊಳ್ಳುತ್ತೀರಿ. ಅದೇ ರೀತಿ ನೀವು ರೆವಿನ್ಯೂ ಇಲಾಖೆಯವರು ಪ್ರವೇಶ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ರೆವಿನ್ಯೂ ಇಲಾಖೆಗೆ ಸಂಬಂಧಪಟ್ಟ ಜಮೀನಾದರೆ ಅವರು ತೆಗೆದುಕೊಳ್ಳುತ್ತಾರೆ. ಅರಣ್ಯಶಾಖೆಗೆ ಸಂಬಂಧಪಟ್ಟಿದ್ದಾದರೆ ಅವರು ತೆಗೆದುಕೊಳ್ಳುತ್ತಾರೆ.

ಶ್ರೀ ಯು. ಎಂ. ಮಾದಪ್ಪ.—ರೆವಿನ್ಯೂ ಇಲಾಖೆಯವರು ನಮಗೆ ಸೇರಿದ್ದೆಂದೂ, ಫಾರೆಸ್ಟ್ ಇಲಾಖೆಯವರು ಅವರಿಗೆ ಸೇರಿದ್ದೆಂದೂ, ಅವರವರಲ್ಲೇ ಡಿಸ್ಪ್ಯೂಟ್ ಬಂದಿರುವುದು ಗೊತ್ತೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಆ ರೀತಿ ಏನೂ ಆಗಿಲ್ಲ.

ACQUISITION OF LANDS FOR CONSTRUCTING HOUSES FOR HARIJANS IN MAMBALLI VILLAGE OF YELANDUR TALUK.

†*Q.*—809. Smt. KEMPAMMA (Kollegal).—

Will the Government be pleased to state :—

(*a*) whether it is a fact that the concerned authorities have ordered the acquisition of 8 acres and 25 guntas of land in S. Nos. 854, 856, 852 and 888 for constructing houses for Harijans in Mamballi Village of Yelandur Taluk ;

(*b*) if so, the reasons for not distributing land so far ?

A.—Sri KADIDAL MANJAPPA (Minister for Revenue).—

(*a*) Yes.

(*b*) The sites will be distributed after the award is declared and the possession of the lands is taken.

ಶ್ರೀಮತಿ ಕೆಂಪಮ್ಮ.—ಯಳಂದೂರು ತಾಲ್ಲೂಕು ಮಾಂಬಳ್ಳಿಯ ಹರಿಜನರ ಅಕ್ಸಿಸಿಷನ್ ರೆಕಾರ್ಡ್ ನಡೆದು ಎಷ್ಟು ವರ್ಷ ಆಯಿತು ತಿಳಿಸುತ್ತೀರಾ ?

†ಶ್ರೀ ಕಡಿದಾಳ್ ಮಂಜಪ್ಪ.—2-3 ವರ್ಷ ಆಗಿರಬೇಕು ಎಂದು ಹೇಳಿ ಮಾನ್ಯ ಸದಸ್ಯರಿಗೇ ಗೊತ್ತಿದೆ.